ಪ್ರತಿಬಿಂಬ
PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue-5, March- April 2025, Pp. 80-86
©*IIMRD*, Mysuru
IIMRD JOURNALS
www.iimrd.com

# ಕನ್ನಡ ಸೀಮಾತೀತ ವಿಮರ್ಶೆಯ ಪರಿಕಲ್ಪನೆ

**ಸಚಿನ್ ಎಸ್[1]. ಮತ್ತು ಪ್ರೊ. ಅರವಿಂದ ಮಾಲಗತ್ತಿ[2]**
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು

**ಸಾರಾಂಶ: (Abstract)**

*ಕನ್ನಡ ಸೀಮಾತೀತ ವಿಮರ್ಶೆ ಒಂದು ಸೈದ್ಧಾಂತಿಕ ಪ್ರತಿಪಾದನೆ. ತಾತ್ವಿಕ ನೆಲೆಗಟ್ಟಿನಲ್ಲಿ ರೂಪಿತವಾದ ಮಹತ್ವಪೂರ್ಣವಾದ ವಿಮರ್ಶಾ ಪರಿಕಲ್ಪನೆ. ದಲಿತ–ಬಂಡಾಯ ಚಳವಳಿಯ ಸಂದರ್ಭದಲ್ಲಿ ಎದ್ದ 'ದಲಿತ ಸಾಹಿತ್ಯ ವಿಮರ್ಶೆ'ಗೆ ಹೊಸ ಮಾನದಂಡಗಳು ಬೇಕು ಎಂಬವಾದ, ಹಲವಾರು ರೀತಿಯ ಚಿಂತನೆಗೆ ದಾರಿಯಾಯಿತು. ಬಂಡಾಯ ಸಂಘಟನೆಯಿಂದ ಪ್ರತ್ಯೇಕವಾದ ನಂತರ ಪ್ರತ್ಯೇಕ ಅಸ್ತಿತ್ವವನ್ನು ಪಡೆದಂತೆ ವಿಮರ್ಶಾಮಾರ್ಗವು ಮಾನವೀಯತೆ ಪ್ರಜ್ಞೆ ಮತ್ತು ದಲಿತ ಪ್ರಜ್ಞೆಯ ತಾತ್ವಿಕ ಹಿನ್ನೆಲೆಯನ್ನು ಒಳಗೊಂಡಿದ್ದ ಕಾರಣ, ತನ್ನ ಆಶಯದ ದ್ಯೋತಕವಾಗಿ 'ಚಾರಿತ್ರಿಕ ದೃಷ್ಟಿಕೋನದ ಹದವತ್ತಾದ ವಾಸ್ತವಿಕಾಂಶಗಳ ಸಾಮಾಜಿಕ ನೇತ್ರತ್ವದ ವಿಮರ್ಶಾ ಮಾರ್ಗವಾಗಿದೆ'.*

**ಮುಖ್ಯಪದಗಳು (Keywords):** ಕನ್ನಡ ಸಾಹಿತ್ಯ, ವಿಮರ್ಶೆ, ಸೀಮಾತೀತ ವಿಮರ್ಶೆ, ಅರವಿಂದ ಮಾಲಗತ್ತಿ

## ಪೀಠಿಕೆ

'ದಲಿತ ವಿಮರ್ಶೆ'ಯನ್ನು 'ಸೀಮಾತೀತ ವಿಮರ್ಶೆ' ಎಂದು ಅರವಿಂದ ಮಾಲಗತ್ತಿಯವರೇ ಅಭಿಧಾನವನ್ನು ನೀಡಿದ್ದಾರೆ. 1998ರಲ್ಲಿ 'ಪುರಾಣ, ಜಾನಪದ ಮತ್ತು ದೇಶಿವಾದ' ಎಂಬ ಕೃತಿಯಲ್ಲಿ 'ದೇಶಿವಾದದ ಸೀಮಾತೀತ ನೆಲೆಗಳು' ಎಂಬ ಲೇಖನದಲ್ಲಿ ಪ್ರಥಮ ಬಾರಿಗೆ 'ಸೀಮಾತೀತ ವಿಮರ್ಶೆ'ಯನ್ನು ಕುರಿತಂತೆ ತಾತ್ವಿಕವಾಗಿ ಬರೆಯುತ್ತಾರೆ. ಈ ಲೇಖನದಲ್ಲಿ ದೇಶೀಯತೆಯನ್ನು ಪ್ರತಿಪಾದಿಸುತ್ತ "ಪಾಶ್ಚಾತ್ಯರಲ್ಲಿ ಯಾವುದೇ ಒಂದು ಅಧ್ಯಯನ ಕ್ರಮ ಹೊರಬಂದಾಕ್ಷಣ ಅದರ ಹಿಂದೆ ಒಂದು ಪಂಥವೇ ಹುಟ್ಟಿಕೊಳ್ಳುತ್ತದೆ. ಆ ಪಂಥದ ಅಧ್ಯಯನಕಾರರು ಅಧ್ಯಯನ ವಿಧಾನಗಳು ಮತ್ತು ಸಾಧ್ಯತೆಗಳನ್ನು ಕುರಿತು ಸಾಕಷ್ಟು ಚರ್ಚಿಸುತ್ತಾರೆ." [1] ನಮ್ಮ ದೇಶೀಯ ತನದ ಸಾಚಾ ಸತ್ವವನ್ನು ಪ್ರವರ್ಧಮಾನಕ್ಕೆ ತರುವ ಇರಾದೆ ಇಲ್ಲಿದೆ. ಪಾಶ್ಚಾತ್ಯರ ಸಿದ್ಧ ಮಾದರಿಗಳನ್ನು ಬಳಸಿಕೊಳ್ಳುವುದರ ಬದಲು ಒಂದು ಆರೋಗ್ಯಕರವಾದ ಅನುಮಾನವನ್ನು ನೈತಿಕ ದೃಷ್ಟಿಕೋನದಿಂದ ನೋಡುವುದು ಉತ್ತಮ. ಪ್ರಾದೇಶಿಕ, ಉಪ ಪ್ರಾದೇಶಿಕ, ಜಾನಪದ ಅಧ್ಯಯನದ ಪಾರದರ್ಶಕತೆ ದೇಶೀವಾದದ ಸೀಮಾತೀತ

[1]. ಅರವಿಂದ ಮಾಲಗತ್ತಿ. *ಸೀಮಾತೀತ ವಿಮರ್ಶೆ*. ಪುಟ.37

*Please cite this article as:* ಸಚಿನ್ ಎಸ್ ಮತ್ತು ಅರವಿಂದ ಮಾಲಗತ್ತಿ. (2025). ಕನ್ನಡ ಸೀಮಾತೀತ ವಿಮರ್ಶೆಯ ಪರಿಕಲ್ಪನೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(5). ಪು.ಸಂ.* 80–86

ವಿಮರ್ಶೆಯಲ್ಲಿದೆ ಎಂಬುದನ್ನು ಕೂಲಂಕಷವಾಗಿ ಚರ್ಚಿಸಿದ್ದಾರೆ. 'ದೇಶೀವಾದದ ಸೀಮಾತೀತ ನೆಲೆಗಳು' ಲೇಖನವೇ ಸೀಮಾತೀತ ವಿಮರ್ಶೆಯು ಅಂಕುರಿಸಲು ಅಡಿಪಾಯವಾಗಿದೆ. ಇದರ ಹಿಂದೆ ಹಲವಾರು ವರ್ಷಗಳ ಅಧ್ಯಯನದ ಕ್ರಮ ಮತ್ತು ಸಂಶೋಧನಾ ಶಿಸ್ತು ಅಡಗಿದೆ.

**ಸೀಮಾತೀತ ವಿಮರ್ಶೆಯ ವ್ಯಾಖ್ಯಾನ**

'ಸೀಮಾತೀತವೆಂದರೆ ಎಲ್ಲವನ್ನೂ ಮೀರಿದ ಸ್ಥಿತಿ ಅಂದರೆ ಭಾಷೆ, ಧರ್ಮ, ಕುಲ, ಗೋತ್ರ, ವರ್ಗ, ವರ್ಣ, ಮಾಂಸಹಾರ, ಸಸ್ಯಾಹಾರ, ಜಾತಿ, ಮೇಲು–ಕೀಳು ಈ ಭಾವನೆಗಳನ್ನು ಮೀರಿ ನಿಂತು ವಸ್ತುನಿಷ್ಠವಾಗಿ ನಿರೂಪಿಸುವುದು'. "ಸೀಮಾತೀತ ಎಂದರೆ ಈ ಹಿಂದೆ ಚರ್ಚಿಸಿದಂತೆ ಧರ್ಮ, ಮತ, ವರ್ಣ, ಕುಲ ಅಥವಾ ಜಾತಿಗಳು ನಿರಂತರವಾದವು ಮತ್ತು ಅವು ಪರಿವರ್ತನಶೀಲ ಗುಣವುಳ್ಳವು ಎನ್ನುವುದನ್ನು ನಂಬಿ, ಇಂಥವ್ಯವಸ್ಥೆಯಲ್ಲಿ ನಾವು ಬದುಕುವುದು ಅನಿವಾರ್ಯ ಎನ್ನುವುದನ್ನು ಲಕ್ಷಿಸಿ, ಅವುಗಳ ಆಳವನ್ನರಿತು ಅವುಗಳನ್ನು ಮೀರಿ ಬದುಕುವುದು. ಈ ಮೀರುವ ಕ್ರಿಯೆಯೇ ಸೀಮಾತೀತ ಪರಿಕಲ್ಪನೆ"[2] ಜಾತಿ, ಧರ್ಮ, ವರ್ಗ, ವರ್ಣ, ಕುಲ, ಗೋತ್ರ, ಭಾಷೆ, ಮಾಂಸಹಾರ, ಸಸ್ಯಾಹಾರ, ಮೇಲು–ಕೀಳು ಈ ಎಲ್ಲವನ್ನು ಮೀರಿ ವಿಮರ್ಶೆ ಮಾಡುವುದೇ ಸೀಮಾತೀತ ವಿಮರ್ಶೆ. 'ದಲಿತ ಪ್ರಜ್ಞೆಯೇ' ಸೀಮಾತೀತ ವಿಮರ್ಶೆಯ ಆಧಾರ. "ದಲಿತೀಯ ಜ್ಞಾನದ ದೀವಿಗೆಯನ್ನು ದೀಪದಿಂದ ದೀಪಕ್ಕೆ ಬೆಳಗುತ್ತ ಹೋಗುವುದೇ ದಲಿತ ಪ್ರಜ್ಞೆ"[3] ಅದು ಸಂಸ್ಕರಿಸಿದ ಸ್ಥಿತಿಯದು ವಾಸ್ತವವನ್ನು ಸಾಹಿತ್ಯ ಮತ್ತು ಸಾಮಾಜಿಕ ನೆಲೆಯಲ್ಲಿ ಗ್ರಹಿಸುತ್ತದೆ. ದಲಿತ ಪ್ರಜ್ಞೆ ಎಂದರೆ ಅದು 'ಮಾನವ ಪ್ರಜ್ಞೆ' ಎಂದೇ ಅರ್ಥ ಮಾನವೀಯತೆ, ಸರ್ವ ಜೀವ ಸಂಕುಲದ ಮೇಲೂ ಅದೇ ಭಾವನೆಯನ್ನು ತಳೆಯುತ್ತದೆ.

1998ರಲ್ಲಿ 'ಕನ್ನಡ ಸಾಹಿತ್ಯ ಮತ್ತು ದಲಿತ ಯುಗ' ಎಂಬ ಪುಸ್ತಕವು ಹೊರಬಂದಿತು. ಕನ್ನಡ ವಿಮರ್ಶಾ ಲೋಕದಲ್ಲಿ ದಲಿತಾನುಭವದ ಮೂಲಕ ಪ್ರಾಚೀನ ಸಾಹಿತ್ಯವನ್ನು ಪುನರ್ ಮೌಲ್ಯೀಕರಣಕ್ಕೆ ಒಳಗು ಮಾಡುವ ಅವಶ್ಯಕತೆಯನ್ನು ಪ್ರತಿಪಾದಿಸುತ್ತ ವಿಮರ್ಶಾ ಕ್ಷೇತ್ರದ ಗೊಂದಲಗಳನ್ನು ಸ್ವಲ್ಪ ಮಟ್ಟಿಗೆ ನಿವಾರಿಸುತ್ತಾರೆ. ಈ ಪುಸ್ತಕದ ಪ್ರಸ್ತಾವನೆಯನ್ನು 'ಸಾಮಾಜಿಕ ಮೌಲ್ಯ ಮತ್ತು ಸೀಮಾತೀತ ವಿಮರ್ಶೆ' ಎಂದು ಕರೆದು ಮಾನದಂಡಗಳು ಬದಲಾಗಬೇಕು ಎಂಬ ಕೂಗಿಗೆ ಪ್ರತ್ಯುತ್ತರವಾದ ವಿಮರ್ಶಾ ಮಾನದಂಡಗಳು ಅನ್ವೇಷಣೆಯಾಗುತ್ತವೆ. ದಲಿತ ಸಾಹಿತ್ಯವನ್ನು ಇದು ಸಾಹಿತ್ಯವೇ ಅಲ್ಲ; ಇದರಲ್ಲಿ ಕವಿತ್ವ ಗುಣಗಳಿಲ್ಲ, ರೊಚ್ಚಿದೆ, ಕೆಚ್ಚಿದೆ, ಆವೇಶ–ಆಕ್ರೋಶವಿದೆ ಎಂಬ ತುಚ್ಛವಾದ ನುಡಿಗಳು ದಲಿತ ಲೇಖಕರು ತಾವೇ ವಿಮರ್ಶೆಯ ಕಡೆ ಮುಖ ಮಾಡಲು ದಾರಿಯಾಯಿತು. "ಯಾವಾಗ ದಲಿತ ಲೇಖಕರು ಬರೆಯಲು ಪ್ರಾರಂಭಿಸಿದರೋ ಆವಾಗ ದಲಿತ ವಿಮರ್ಶೆಯೆಂಬ ಪರಿಕಲ್ಪನೆ ಹುಟ್ಟಿಕೊಂಡಿತು"[4] ಹಾಗಾಗಿ ಸಾಮಾಜಿಕ ಅಸ್ಮಿತೆಯು, ದಲಿತ ಪ್ರಜ್ಞೆಯು ಪ್ರಜ್ಞಾಪೂರ್ವಕವಾಗಿಯೇ ತನ್ನ ಅನುಭವವನ್ನು ಅಭಿವ್ಯಕ್ತಿಸಿ ಅದನ್ನು ವಿಮರ್ಶೆಗೂ ತರಲಾಯಿತು. 'ಅಸಾಹಿತ್ಯಿಕ ವಿಮರ್ಶೆ' ಎಂದವರಿಗೂ 'ದಲಿತ ಯುಗ ಮತ್ತು ಕನ್ನಡ ಸಾಹಿತ್ಯ'

---

[2]. ಅರವಿಂದ ಮಾಲಗತ್ತಿ. *ಪುರಾಣ, ಜಾನಪದ ಮತ್ತು ದೇಶಿವಾದ.* ಪುಟ.57

[3]. ಅರವಿಂದ ಮಾಲಗತ್ತಿ. *ದಲಿತ ಸಾಹಿತ್ಯ.* ಪುಟ.6

[4]. ಕೇಶವಶರ್ಮ ಕೆ. *ನೀಲಲಕ್ಷೆ.* ಪುಟ.227

ವಿಮರ್ಶಾ ಕೃತಿಯು ‘ದಲಿತ ವಿಮರ್ಶೆ’ ತನ್ನ ತಾತ್ವಿಕ ನೆಲೆಯನ್ನು ವಿಚಾರಗಳ ಸರಣಿಯನ್ನು ವಿದ್ಯುಕ್ತವಾಗಿ ತೋರಿಸಿತು.

**“**ನವ್ಯರ ಸಿದ್ಧ ವಿಮರ್ಶೆಯ ಮಾನದಂಡಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡು ಮೂಲೆಗುಂಪಾಗುವ ಮತ್ತು ಹೊಸ ವಿಮರ್ಶೆಯ ಮಾನದಂಡಗಳನ್ನು ಶೋಧಿಸುವ ಕಾಲವಾಗಿ ನಿಂತಿತು**”**[5] ಅದೇ ರೀತಿ ನವ್ಯ ವಿಮರ್ಶೆಯನ್ನು ವ್ಯಷ್ಟಿನೆಲೆಯ ಮಾನದಂಡವಾಗಿರುವುದರಿಂದ ಸಂಸ್ಕೃತಿ, ಭಾಷೆ, ಸಾಮಾಜಿಕ, ಸಾಮುದಾಯಿಕ ಆಸ್ಥೆ ವಿರಳವೆಂದು ಬಿಂಬಿಸಲಾಯಿತು. ಪ್ರಾರಂಭದ ದಲಿತ ಸಾಹಿತ್ಯವನ್ನು ವ್ಯಾಪಕವಾಗಿ ಟೀಕೆಗೆ ಗುರಿ ಮಾಡಿದ್ದು ನವ್ಯ ವಿಮರ್ಶೆಯೇ. ಅದೂ ಅಲ್ಲದೆ ವಿಮರ್ಶೆಯ ಧಾಟಿ ತೆಗಳಿಕೆಯ ಸ್ವರೂಪದಲ್ಲಿತ್ತು. ಸಾಹಿತ್ಯ ಕೃತಿಯೊಂದನ್ನು ವಿಮರ್ಶಿಸುವ ಕ್ರಮಕ್ಕಿಂತ ಭಿನ್ನ ನಿಲುವನ್ನು ಅರವಿಂದ ಮಾಲಗತ್ತಿಯವರು ತೆಳೆಯುತ್ತಾರೆ. ಕೇಶವಶರ್ಮ ಅವರು ಗುರುತಿಸಿದಂತೆ **“**ಸಾಹಿತ್ಯ ಕೃತಿಯನ್ನು ನೋಡುವ ಕ್ರಮವು ಅವರಿಗೆ ಮುಖ್ಯವಲ್ಲ. ಸಂಸ್ಕೃತಿ ಮತ್ತು ಸಮಾಜಗಳ ನಡುವಣ ಒಳ ಸಂಘರ್ಷಗಳ ಅಭಿವ್ಯಕ್ತಾತ್ಮಕ ನೆಲೆಗಳಾಗಿ ಸಾಹಿತ್ಯ ಕೃತಿಗಳಿರುತ್ತವೆ.**”**[6] ವಿಮರ್ಶೆಯೆನ್ನುವುದನ್ನು ಒಂದು ಸಂಕಥನವಾಗಿಯು, ಸಾಮಾಜಿಕ ದೇಶಿ ಚಿಂತನೆಯ, ಬದುಕಿನ ಅನುಭವವಾಗಿಯು ಪರಿಭಾವಿಸುವ ವಿಧಾನವಾಗಿ ನೋಡುತ್ತದೆ.

2003ರಲ್ಲಿ **‘**ಸಾಹಿತ್ಯ, ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ**’** ಕೃತಿಯಲ್ಲಿ ‘ಸೀಮಾತೀತ ವಿಮರ್ಶೆ ಮತ್ತು ಆರೋಗ್ಯಕರ ಸಮಾಜ’ ಎಂಬ ಲೇಖನ ಬಹುಮುಖ್ಯವಾದುದು. ದಲಿತ ವಿಮರ್ಶೆ ತನ್ನ ದಲಿತತ್ವ ಎನ್ನುವ ಪರಿಭಾಷೆಯಿಂದ ಸಾಹಿತ್ಯ ಕೇಂದ್ರದಲ್ಲಿ ಅಧಿಕೃತವಾದ ನೆಲೆಯನ್ನು ಕಂಡುಕೊಳ್ಳಲು, ತನ್ನ ಕ್ಷೇತ್ರದ ಹರವನ್ನು ಹೆಚ್ಚಿಸಿಕೊಂಡಿತು. ಆರೋಗ್ಯಕರ ಸಮಾಜ, ಅನುಭವದ್ರವ್ಯತೆ ಜಾತ್ಯಾತೀತ ಚಿಂತನೆ, ಹಿಂದಿನ ವಿಮರ್ಶಾ ಪರಿಭಾಷೆಗಳ ನಡುವಿನ ಭಿನ್ನತೆಗಳನ್ನು ಗುರುತಿಸಿಕೊಳ್ಳುವುದು, ಧರ್ಮ, ವರ್ಣ, ಕುಲ, ಮತ, ಜಾತಿಗಳ ಕುರಿತಂತೆ ಮಾನದಂಡಗಳ ಆವಿಷ್ಕಾರವನ್ನು ತನ್ನದೆ ಚಿಂತನಾಕ್ರಮದಲ್ಲಿ ರೂಪಿಸಿಕೊಳ್ಳುವುದು ‘ಸೀಮಾತೀತ ವಿಮರ್ಶೆಯ ಸ್ಥಾಯಿಯಾಗಿದೆ’. ದೇಶೀಯ ಚಿಂತನೆಯ ಬದುಕಿನ ಅನುಭವದ ಭಾಗವಾಗಿ ಜನ್ಯವಾದ ಸೀಮಾತೀತ ವಿಮರ್ಶೆ, ಕನ್ನಡದಲ್ಲಿ ಸ್ವಂತಿಕೆಯ ವಿಮರ್ಶಾ ಮಾರ್ಗವೇ ಇಲ್ಲ ಎನ್ನುವಾಗ ಇಂಥ ವಿಮರ್ಶನದ ಸೈದ್ಧಾಂತಿಕತೆ, ತಾರ್ಕಿಕತೆ ಸ್ವಂತಿಕೆಯ ಪ್ರತೀಕವಾಗಿಯು, ನೆಲಮೂಲದ ಅಸ್ತಿತ್ವವಾಗಿಯು ಕಾಣುತ್ತದೆ. ‘ಸೀಮಾತೀತ’ ಎನ್ನುವುದನ್ನು ಪದಶಃ ಅರ್ಥದಿಂದ ನೋಡಿದಾಗ ಪ್ರಾಚೀನ ಕಾಲದಲ್ಲಿನ ಆಡಳಿತ ವರ್ಗ ಬಳಸುತ್ತಿದ್ದ ‘ಸೀಮೆ’ ಇದಕ್ಕೆ ಸಮೀಪವರ್ತಿಯಾಗುತ್ತದೆ. ಪ್ರತಿಯೊಂದು ಗ್ರಾಮ ಅಥವಾ ರಾಜ್ಯದ ಗಡಿಯನ್ನು ಗುರುತಿಸುವಾಗ ‘ಸೀಮೆ’ ಎಂಬ ಪದವನ್ನು ಬಳಸುತ್ತಾರೆ. ಸೀಮೆ – ಎಂದರೆ ಗಡಿ, ಎಲ್ಲೆ, ಮೇರೆಯನ್ನು ಸೂಚಿಸುತ್ತದೆ. ಅವಾರ್ಚೀನ ಸಂದರ್ಭದಲ್ಲಿ ಎಲ್ಲೆಯನ್ನು ಗುರುತಿಸಲು ‘ಸರಹದ್ದು’ ಎಂಬುದಾಗಿ ಬಳಸಲಾಗುತ್ತಿದೆ.

ಮಂಗರಾಜನ ‘ಅಭಿನವವಾಧಿದಾನಂ’ ಗ್ರಂಥದಲ್ಲಿ ‘ಆ ಸೀಮೆಯಾಘಂಟಮೆನೆ ಹೊಲ ಮೇರೆಯೂರೆರಡರೆಡೆನಡು ಪ್ರಾಂತವಕ್ಕುಂ’ ಎಂದು ಎರಡು ಊರುಗಳ ನಡುವಣ ಪ್ರಾಂತ್ಯವನ್ನು ‘ಸೀಮೆ’

[5]. ಅರವಿಂದ ಮಾಲಗತ್ತಿ. *ದಲಿತ ಯುಗ ಮತ್ತು ಕನ್ನಡ ಸಾಹಿತ್ಯ.* ಪ್ರಸ್ತಾವನೆ

[6]. ಕೇಶವಶರ್ಮ. *ಪ್ರೊ.ಅರವಿಂದ ಮಾಲಗತ್ತಿಯವರ ಮಾರ್ಗ ಸಾಹಿತ್ಯ.* ಪುಟ.34

ಎಂದು ಕರೆಯುತ್ತಾನೆ. ಕ್ರಿ.ಶ.8ನೆಯ ಶತಮಾನದ ಒಂದು ಶಾಸನದಲ್ಲಿ "ವಡಗಣ್ಣಾ ಸೀಮೆ ಪೆರೆದುಱ ಮಡುವಣ್ಣಾ ಸೀಮೆ ತಣ್ಣಿಳ್ಳಿಗಾರ ಪಾಱ ತೆಱ್ಕಣ್ಣಾ ಸೀಮೆ ನೆಯ್ದಲ್ಗೆಱೆಯಾ ಏರಿ"[7] ಸೀಮೆ ಎನ್ನುವುದನ್ನು ದಿಕ್ಕು ಸೂಚಕವಾಗಿ ಪ್ರತಿಬಿಂಬಿಸಲಾಗಿದೆ.

ಕವಿರಾಜಮಾರ್ಗಕಾರನು ಕನ್ನಡ ನಾಡಿನ ಮೇರೆ ಗುರುತಿಸುವುದು 'ಪ್ರಾದೇಶಿಕವಾಗಿ' ಭೌಗೋಳಿಕ ಎಲ್ಲೆಯನ್ನು ಪರಿಗಣಿಸಲು ಬಳಸುತ್ತಾನೆ. ಒಂದು ಪ್ರಾಂತ್ಯ ಅಥವಾ 'ಭೌಗೋಳಿಕ ವಿಸ್ತೀರ್ಣ'ವನ್ನು, ಅದರ ವ್ಯಾಪ್ತಿ, ಅಗಲವನ್ನು ಮೇರೆಯ ಮೂಲಕ ಗುರುತಿಸುವುದು ಹಿಂದಿನಿಂದಲೂ ಬೆಳೆದುಬಂದ ಪರಿಪಾಟವಾಗಿದೆ. ಪಂಪನು ತನ್ನ ಭಾಷೆಯನ್ನು 'ತಿರುಳ್ಗನ್ನಡ ಪುಲಿಗೆರೆಯ ಭಾಷೆ' ಎನ್ನುವಾಗ ಸೀಮೆಯ ಪರಿಕಲ್ಪನೆ ಬರುತ್ತದೆ. ಪ್ರಾಚೀನ ಸಾಹಿತ್ಯ ಮತ್ತು ಮಹಾನ್ ಕವಿಗಳ ಸಾಹಿತ್ಯವಲೋಕನ ಮಾಡಿದರೆ 'ಸೀಮೆ' ಎನ್ನುವ ಪದವು ಗಡಿ, ಮೇರೆ, ಎಲ್ಲೆ ಎನ್ನುವ ಅರ್ಥದಲ್ಲೆ ಬಳಕೆಯಾಗಿದೆ. ಅದು ಪ್ರಾಂತ್ಯವನ್ನೋ, ಅದರ ವಿಸ್ತೀರ್ಣತೆಯನ್ನೋ ಗುರುತಿಸುತ್ತದೆ. ಕನ್ನಡ ವಿಮರ್ಶೆಯ ಕಾಲಘಟ್ಟದಲ್ಲಿ ಈ ಪದ ವಿಶಿಷ್ಟವಾಗಿ ಬಳಕೆಯಾಗುತ್ತದೆ. 'ಒಂದು ಪರಿಕಲ್ಪನಾತ್ಮಕ ನೆಲೆ ಅದಕ್ಕೆ ದಕ್ಕುತ್ತದೆ'. 'ಸೀಮೆಯನ್ನು ಮೀರುವ ಕಾಳಜಿ ಇದೆ ಅದು ಮೀರುವ ಕ್ರಿಯೆ ಎಂದರೆ 'ಜಾತಿ, ಧರ್ಮ, ಕುಲ, ಗೋತ್ರ, ಮತ, ಸಸ್ಯಾಹಾರ, ಮಾಂಸಹಾರ, ವರ್ಗ, ವರ್ಣ, ಭಾಷೆ ಈ ಎಲ್ಲದರ ಎಲ್ಲೆಯನ್ನು ಮೀರಿ ನಿಲ್ಲುವ ಕ್ರಿಯೆ'.

'ಅನಕೃ' ಅವರು ಕನ್ನಡ ಸಾಹಿತ್ಯದ ಸಂದರ್ಭವನ್ನು ಕುರಿತು ಭಾಷಣ ಮಾಡುವಾಗ 'ಸಾಹಿತ್ಯ ರಚನಾಕ್ರಮ, ರೀತಿ ಮತ್ತು ಸಾಮಾಜಿಕ ಶೋಷಣೆಯ ಭಾಗವಾದ ಆಷಾಡಭೂತಿತನವನ್ನು ವಿಡಂಬಿಸುತ್ತ ಸಾಹಿತಿಯಾದವನ ಸಾಮಾಜಿಕ ಜವಾಬ್ದಾರಿ ಯಾವುದು? ಎನ್ನುವುದನ್ನು ಚರ್ಚಿಸುವಾಗ "ಸೀಮಾತೀತ ಬುಡ್ಡ' ಎಂಬ ಪದ ಪ್ರಯೋಗ ಮಾಡುತ್ತಾರೆ."[8] ಸಾಹಿತ್ಯ ಸೃಷ್ಟಿಯ ಕರ್ತವ್ಯ, ಜವಾಬ್ದಾರಿಯನ್ನು ನಿರ್ದೇಶಿಸುತ್ತಾ, ಇಂದಿನ ಸಾಹಿತ್ಯ ರಚನೆಯ ಉದ್ದೇಶವನ್ನು ಸ್ಪಷ್ಟ ಪಡಿಸುತ್ತಾರೆ. ಕನ್ನಡ ಸಾಹಿತ್ಯ ಮತ್ತು ವಿಮರ್ಶೆಯನ್ನು ಅವಲೋಕಿಸಿದಾಗ ಅಲ್ಲಿ ಮೀಮಾಂಸೆಯ ನೆಲೆಯೇ ಅಧಿಕೃತತೆಯನ್ನು ಪಡೆದಿದೆ. ಹಿಂದಿನ ವಿಮರ್ಶೆಗಳಿಗೆ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಮತಾಧಾರಿತ ವಿಚಾರಗಳಿಗಿಂತ ತಾಂತ್ರಿಕತೆಯ ವಿಚಾರಗಳು, ಶೈಲಿ, ವಿನ್ಯಾಸ ಮುಖ್ಯವಾಗಿತ್ತು. ಆದುದರಿಂದ "ಸಾಹಿತ್ಯ ವಿಮರ್ಶೆ ಮತ್ತು ಸಾಹಿತ್ಯ ತತ್ವಗಳು ಕನ್ನಡದ ಸಂದರ್ಭದಲ್ಲಿ ಕೊಂಚ ಮಟ್ಟಿಗಾದರೂ ಅನುಮಾನ ಹುಟ್ಟಿಸುವ ಸಾಹಿತ್ಯ ರೂಪಗಳಾಗಿವೆ"[9] ಇದರಿಂದಾಗಿಯೇ ಪಾಶ್ಚಾತ್ಯ ಸಿದ್ಧ ಮಾನದಂಡಗಳ ಮೇಲೆ ಆರೋಗ್ಯಕರವಾದ ಅನುಮಾನವನ್ನು ಹೊಂದಿದ್ದು ಪರಿಷ್ಕರಣದ ಕೆಲಸ ಮಾಡುತ್ತದೆ. ಈ ಹಿನ್ನೆಲೆಯಲ್ಲಿ ವಿಮರ್ಶಾ ಮಾನದಂಡಗಳು ಬದಲಾವಣೆಯ ಸ್ವರೂಪವನ್ನು ಪಡೆದುಕೊಂಡಿತು. ಆಗ 'ದಲಿತ ವಿಮರ್ಶೆ' ಸಾಮಾಜಿಕ, ಸಾಂಸ್ಕೃತಿಕ ವಿಮರ್ಶೆಯಾದಾಗ ಅದರ ಆಶಯ ಮತ್ತು ವಾಸ್ತವತೆಗೆ ಸ್ಪಂದಿಸುವ ಚೈತನ್ಯದ ಭಾಗವಾಗಿ ಸಾಹಿತ್ಯ ರಚನೆಯಾಗಬೇಕು ಎಂದು ತಾತ್ವಿಕ ನೆಲೆಗಟ್ಟು ನಿರ್ಮಾಣವಾದಾಗ 'ಸೀಮಾತೀತ ವಿಮರ್ಶೆ' ಅವತರಿಸುತ್ತದೆ.

---

7. ಎಪಿಗ್ರಫಿಯಾ ಕರ್ನಾಟ (2009) ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ, ಉಲ್ಲೇಖ – 'ಶಾಸ್ತ್ರಸಂಕಲ್ಪ' ಕೃತಿ
8. *ಅನಕೃ ಬರಹ–ಭಾಷಣಗಳು.* ಪುಟ.100
9. ನೀಲನಕ್ಷೆ – ಕೆ. ಕೇಶವಶರ್ಮ – ಸಾಹಿತ್ಯ ವಿಮರ್ಶೆಯ ಕಾರ್ಯ (ಲೇ) – ಪು.1

**ಪರಿಕಲ್ಪನೆಯ ಹಿನ್ನೆಲೆ**

"ದಲಿತ ವಿಮರ್ಶೆ ಎಂದರೆ ಕೇವಲ ಕೆಲವು ದಲಿತ ಸಾಹಿತಿಗಳ ಮತ್ತು ಅವರ ಸಾಹಿತ್ಯ ಕೃತಿಗಳ ಪರಿಶೀಲನೆ ಅಲ್ಲ. ದಲಿತ ವಿಮರ್ಶೆ ಅನ್ನುವುದು ಒಂದು ವಿಶಿಷ್ಟ ಅನುಭವದ ನೆಲೆ ಹಾಗೆ ಅದೊಂದು ಮನೋಧರ್ಮ."[10] ದಲಿತ ಅನುಭವದ ಲೋಕವೇ ವಿಸ್ತಾರವಾದುದು. ಈ ಚಲನಶೀಲ ಸ್ತರವಿನ್ಯಾಸಗಳು ಮತ್ತು ವಿಮರ್ಶೆಯ ಆಂತರಂಗಿಕ, ಬಾಹ್ಯ ಏಳು–ಬೀಳುಗಳು ವಿಮರ್ಶೆಯ ಮಾನದಂಡಗಳು ಸಹಜ ಸೃಷ್ಟಿಯಾಗಲು ನಿಮಿತ್ತವಾಗಿವೆ. ದಲಿತ ವಿಮರ್ಶೆಯನ್ನು 'ಸೀಮಾತೀತ ವಿಮರ್ಶೆ' ಎಂದು ಕರೆಯಲು ಅರವಿಂದ ಮಾಲಗತ್ತಿಯವರು ಕೊಡುವ ಕಾರಣಗಳು ಅದರ ತಾತ್ವಿಕ ಹಿನ್ನೆಲೆಯಿಂದ ರೂಪಿತವಾಗಿವೆ.

ದಲಿತ' ಎಂಬ ಪದ ಕುರಿತು ಕಾಲದಿಂದ ಕಾಲಕ್ಕೆ ವ್ಯಾಖ್ಯಾನಗಳು ಬದಲಾಗಿವೆ. 'ದಲಿತ' ಎಂದರೇ ಯಾರು? ಎಂಬ ವ್ಯಾಖ್ಯಾನಗಳನ್ನು ಗಮನಿಸಿದರೆ ಇದು ವೇದ್ಯವಾಗುತ್ತದೆ.

'ದಲಿತ' ಎನ್ನುವ ಪದ ಕುರಿತ ಚಿಂತನೆಯ ಗೊಂದಲದಂತೆ, 'ದಲಿತ ಸಾಹಿತ್ಯ' ಯಾವುದು? ಎನ್ನುವಲ್ಲಿಯು ಭಿನ್ನಾಭಿಪ್ರಾಯಗಳಿದ್ದು ಈ ಗೊಂದಲವು ದಲಿತ ವಿಮರ್ಶೆಗೆ ತಳುಕು ಹಾಕಿಕೊಳ್ಳದಿರಲಿ ಎನ್ನುವುದು.

ಒಂದು ವಿಮರ್ಶಾ ಪಂಥವೂ ತಾನು ಹೊಂದಿರುವ ಆಶಯ ಮತ್ತು ವಿಮರ್ಶಾ ಮಾನದಂಡಗಳು, ತಾತ್ವಿಕತೆಯ ನಿಲುವುಗಳಿಂದ ಪ್ರತಿನಿಧಿಸುವ ಹೆಸರಿನಿಂದ ಗುರುತಿಸಿದಾಗ ಅಥೆಂಟಿಕ್ ಆಗಿರುವುದು, ಇನ್ನೂ ಹೆಚ್ಚಿನ ಸಮರ್ಥತೆ ಪಡೆಯುವ ಸಾಧ್ಯತೆಗಳಿವೆ.

ದಲಿತ ವಿಮರ್ಶೆಯ ಪರಿಕ್ಲಪನೆಯು ರೂಪುಗೊಳ್ಳುವಲ್ಲಿ ದಲಿತ ಲೇಖಕರ ವಿಚಂದ ವಿಮರ್ಶೆಯಂತೆ, ಬಂಡಾಯದ ಪ್ರಗತಿಪರರ ಕೊಡುಗೆಯು ಇದೆ ಹಾಗಾಗಿ 'ಸೀಮಾತೀತ ವಿಮರ್ಶೆ' ಎಂಬ ಹೆಸರು ವಿಶಾಲ ದೃಷ್ಟಿಕೋನದ ಪರಿಕಲ್ಪನೆ.

'ಸೀಮಾತೀತತೆ' ಎಂಬ ವಿಮರ್ಶೆಯು ಸಾಮಾಜಿಕ ಮೌಲ್ಯದ, ಆದರ್ಶದ ಪ್ರತೀಕ. ಇದು ಕೇವಲ ದಲಿತರಿಗೆ ಮಾತ್ರ ಸಂಬಂಧಿಸಿದಲ್ಲ. ಈ ಸಿದ್ಧಾಂತದ ಜಾತ್ಯಾತೀತ ಹಾಗೂ ಧರ್ಮಾತೀತ ನಿಲುವು, ವಿಚಾರಗಳಿಂದ ಇದನ್ನು ಯಾರು ಅಳವಡಿಸಿಕೊಂಡು ವಿಚಾರ ವಿಮರ್ಶೆಗೆ ಮುಂದಾಗಬಹುದು."[11]

ಬಂಡಾಯದ ಪ್ರಗತಿಪರ ಚಿಂತಕರು ದಲಿತರನ್ನು ಕುರಿತು ಬರೆದರು ಅನುಭವದ ಪ್ರಶ್ನೆಯಿಂದ ಚರ್ಚಿಸಿದಾಗ ದಲಿತ ಸಾಹಿತಿಯ ಸಂವೇದನೆ ಹೆಚ್ಚು ಗ್ರಹಿಕೆಯಿಂದ ಕೂಡಿರುವಂತದ್ದು. ದಲಿತೇತರರ ಸಂವೇದನಾ ಸೂಚ್ಯಂಕ ದಲಿತ ಸಾಹಿತಿಗಿಂತ ಕಡಿಮೆಯ ಮಟ್ಟದಾಗಿರುತ್ತದೆ. ದಲಿತ ಕೃತಿಯನ್ನು ದಲಿತ ಓದಿ ಗ್ರಹಿಸುವುದಕ್ಕೂ ದಲಿತೇತರ ಓದಿ ಗ್ರಹಿಸುವುದಕ್ಕೂ ವ್ಯತ್ಯಾಸಗಳನ್ನು ಗುರುತಿಸಬಹುದು. ಅನುಭವದೊಂದಿಗೆ ಸಾಮಾಜಿಕ ಅನುಭವದ ಪ್ರಾಮಾಣ್ಯವು ಮುಖ್ಯ. ದಲಿತ ಸಾಹಿತಿಗಳ ಬಹುಮುಖ್ಯವಾದ ಕೇಂದ್ರ ಪ್ರಜ್ಞೆ ದಲಿತಾನುಭವವೆಂಬುದು. "ಓದಿನ ಅನುಭವ ಮತ್ತು ಸಾಮಾಜಿಕ ಅನುಭವ ಇವೆರಡನ್ನೂ

[10]. ದಲಿತ ಸಾಹಿತ್ಯ ಸಂಪುಟ – ವಿಮರ್ಶೆ(ಪ್ರಸಂ)– ಮನುಬಳಿಗಾರ್, (ಲೇ) ಕನ್ನಡ ದಲಿತ ಸಾಹಿತ್ಯ : ವಿಚಾರ/ವಿಮರ್ಶೆ – ಶಿವಾನಂದ ಕೆಳಗಿನಮನಿ

[11]. ಸೀಮಾತೀತ ವಿಮರ್ಶೆ – ಅರವಿಂದ ಮಾಲಗತ್ತಿ – ಪು.14

ಸಂಕರಗೊಳಿಸಿದಾಗ ಈ ಎರಡೂ ಸೀಮಾರೇಖೆಗಳನ್ನು ಮೀರಲು ಸಾಧ್ಯವಾಗುತ್ತದೆ ಮತ್ತು ಅಲ್ಲಿ **'ಸೀಮಾತೀತ ವಿಮರ್ಶೆ' ಹುಟ್ಟಿಕೊಳ್ಳುತ್ತದೆ."**[12] ಸಾಹಿತ್ಯ ಮತ್ತು ಸಾಮಾಜಿಕ ಸ್ಥಿತ್ಯಂತರಗಳು ದಲಿತರ ಬದುಕಿನ ಮೇಲೆ ಪ್ರಭಾವ ಬೀರುವುದರೊಂದಿಗೆ, ದಲಿತರ ವಿಚಾರಗಳ ವಿಮರ್ಶೆ, ಚಿಂತನೆಯ ಧಾಟಿ ಕನ್ನಡ ಸಾಹಿತ್ಯ ಮತ್ತು ವಿಮರ್ಶೆಯ ಮೇಲೆ ಪ್ರಭಾವ ಬೀರಿದೆ. ಸಾಹಿತ್ಯಿಕ ಚಿಂತನೆ ಏಕಮುಖವಾಗದೆ ಓದಿನ ಅನುಭವವನ್ನು ಅಪೇಕ್ಷಿಸುತ್ತದೆ. ದಲಿತರ ಬೌದ್ಧಿಕ ಮತ್ತು ಭೌತಿಕವಾಗಿ ಅನುಭವಿಸಿದ ಯಾತನೆಗಳು, ಮಾನಸಿಕ ಹಿಂಸೆ, ಭರವಸೆಯ ಹಂಬಲ, ಆಸೆ, ಕನಸು, ದಬ್ಬಾಳಿಕೆಯ ಭಯ, ಶೋಷಣೆ, ರೋಷ, ಆಕ್ರೋಶ, ವ್ಯವಸ್ಥೆಯ ವಿರುದ್ಧದ ಪ್ರತಿರೋಧ, ಅಪಮಾನ, ಅವಮಾನ, ಭಾರತೀಯ ಸಾಮಾಜಿಕ ವ್ಯವಸ್ಥೆಗಳಲ್ಲಿನ ಸಂಕೀರ್ಣತೆ, ದೇವರ ಹೆಸರಿನಲ್ಲಿ ನಡೆದ ಆಡಂಬರ, ಆಷಾಢಭೂತಿತನದ ವೈರುಧ್ಯತನವನ್ನು ವಿಡಂಭಿಸುವ ಮಾನವೀಯ ಮೌಲ್ಯಗಳ ಕಿಮ್ಮತ್ತನ್ನು ಗುರುತಿಸುವ ಔನತ್ಯವನ್ನು ಸೂಚಿಸುತ್ತದೆ. ಈ ಮೂರ್ತ, ಅಮೂರ್ತ ವಿಚಾರಗಳನ್ನು ಸಾದ್ಯಂತವಾಗಿ ವಿಶ್ಲೇಷಣೆಗೆ ಒಳಪಡಿಸುವ ತುರ್ತನ್ನು ಒತ್ತಿ ಹೇಳುವುದು ಈ ಹೊತ್ತಿನ **"ಸೀಮಾತೀತ ವಿಮರ್ಶೆ"**[13] ಎಂಬುದಾಗಿ ಶಿವಾನಂದ ಕೆಳಗಿನಮನಿಯವರು ಗುರುತಿಸಿದ್ದಾರೆ.

**ಧೋರಣೆಗಳು**

ದಲಿತ ಎಂಬುದನ್ನು ಇಂಡಿಯಾದ್ಯಂತ ಒಂದು ಸಂವೇದನಾ ಮಾದರಿಯಾಗಿ ಮತ್ತು ಸಾಹಿತ್ಯ ಚಿಂತನಾ ಕ್ರಮವನ್ನಾಗಿ ಈ ಮೂಲಕ ಗುರುತಿಸುವುದು ಸಮಂಜಸ. ದಲಿತರ ವರ್ತಮಾನದ ಜಟಿಲ ಸಮಸ್ಯೆಗಳೊಂದಿಗೆ ಸಮಾಜದ ಎಲ್ಲಾ ತುಳಿತ ವರ್ಗದವರನ್ನೂ, ಸಾಮಾಜಿಕವಾಗಿ ಶೋಷಣೆಗೊಳಪಟ್ಟವರನ್ನು ತನ್ನ ಪರಿಧಿಯೊಳಗಿರಿಸಿಕೊಂಡಿರುವುದರಿಂದ **'ದಲಿತ ವಿಮರ್ಶೆ'** ಇಂದಿನ ಸಮಾಜದ ವಾಸ್ತವತೆಗೆ ಗಮನ ನೀಡುವ ಮೂಲಕ ಅಧ್ಯಯನ ಶೀಲತೆಯೊಂದಿಗೆ ಸಂಶೋಧನಾ ನೆಲೆಯನ್ನು ವಿಸ್ತರಿಸಿಕೊಂಡುದರ ಮಾರ್ಪಾಡಿನಿಂದಾಗಿ ಚಾರಿತ್ರಿಕ ಸಂಗತಿಗಳ ಸೂಕ್ಷ್ಮತೆಗಳನ್ನು ಅರಿಯುವ ಗುರಿ ಸಮಕಾಲೀನವಾದುದು. ಸೀಮಾತೀತ ವಿಮರ್ಶೆಯು ತನ್ನದೆ ಆದ ವೈಶಿಷ್ಟ್ಯವನ್ನು ಮತ್ತು ಧೋರಣೆಗಳಿಂದಲೇ ವಿಮರ್ಶೆಯನ್ನು ಅನಾವರಣಗೊಳಿಸುತ್ತದೆ. ಪ್ರಮುಖ ಧೋರಣೆಗಳು:

- ಅಸ್ಪೃಶ್ಯತೆಗೆ ಕಾರಣಗಳು ಮತ್ತು ಪರಿಣಾಮಗಳ ಹುಡುಕಾಟ
- ದಲಿತ ಸಂಸ್ಕೃತಿ ಮತ್ತು ಜಾಗತೀಕರಣದ ಸಂದರ್ಭ.[14]
- ದಲಿತ ಚಳವಳಿ – ಭಾಷೆ – ಸಮಾಜ – ಸಂಸ್ಕೃತಿ – ಸಾಹಿತ್ಯ ಇವುಗಳ ಅಂತರ್ ಸಂಬಂಧದ ವಿಶ್ಲೇಷಣೆ
- ದಲಿತ ಸಾಹಿತ್ಯ ಮತ್ತು ಇತರೆ ಸಾಹಿತ್ಯಗಳ ಸಮಕಾಲೀನ ಸಂದರ್ಭ

---

[12]. ಸೀಮಾತೀತ ವಿಮರ್ಶೆ – ಅರವಿಂದ ಮಾಲಗತ್ತಿ – ಪು.36

[13]. ಮನುಬಳಿಗಾರ್. (ಸಂ.) *ದಲಿತ ಸಾಹಿತ್ಯ – ವಿಮರ್ಶೆ*. ಪುಟ.112

[14]. ಅರವಿಂದ ಮಾಲಗತ್ತಿ ಮತ್ತು ಮೊಗಳ್ಳಿ ಗಣೇಶ್ ಅವರ ಕೃತಿಗಳು.

- ಓದಿನ ಅನುಭವ ಮತ್ತು ಸಾಮಾಜಿಕ ಅನುಭವದ ಪ್ರಾಮಾಣ್ಯ
- ಭೂತ, ವರ್ತಮಾನ ಮತ್ತು ಭವಿಷ್ಯತ್ತನ್ನು ಕೇಂದ್ರವಾಗಿಟ್ಟುಕೊಂಡು ಸಮಾಜದಲ್ಲಿ ಬದಲಾವಣೆಯನ್ನು ತರುವುದು.
- ಭ್ರಮಾತ್ಮಕ ನೆಲೆಯ ಚಿಂತನೆಯನ್ನು ಸಾಧ್ಯವಾದಷ್ಟು ನಿಯಂತ್ರಿಸಿ ಸಾಮಾಜಿಕ ಸತ್ಯ ಮತ್ತು ನೈಜ್ಯತೆಯನ್ನು ಪುರಷ್ಕರಿಸುವುದು
- ನೈತಿಕ ಮೌಲ್ಯಗಳನ್ನು ಪ್ರತಿಪಾದಿಸುವುದು
- ಸಾಹಿತ್ಯ ಕೇಂದ್ರಿತ ಮತ್ತು ಸಮಾಜ ಕೇಂದ್ರಿತ ಅನುಭವಗಳ ಸಂಕರದಿಂದ ಸೀಮಾತೀತ ವಿಮರ್ಶೆ ಜನ್ಮ ತಾಳುತ್ತದೆ ಎಂದು ಪ್ರಬಲವಾಗಿ ನಂಬಿದೆ.
- ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ವಾಗ್ವಾದವು ಆರೋಗ್ಯಕರವಾಗಿದ್ದಾಗ ವಿಚಾರಗಳು ಮಥನವಾಗಿ 'ಸೀಮಾತೀತ ವಿಮರ್ಶೆ' ಜಾಗ್ರತವಾಗುವುದರಿಂದ ವಾಗ್ವಾದಕ್ಕೆ ಅವಕಾಶ ನೀಡುವುದು.
- ಪ್ರತಿಗಾಮಿ ವ್ಯವಸ್ಥೆಯನ್ನು ಧಿಕ್ಕರಿಸಿ ಪ್ರಗತಿಗಾಮಿ ವ್ಯವಸ್ಥೆಯನ್ನು ಬೆಂಬಲಿಸುವುದು

ಸೀಮಾತೀತ ವಿಮರ್ಶೆಯ ಧೋರಣೆಗಳು ಹೊಸ ವಿಮರ್ಶಾ ವಿನ್ಯಾಸದ ತುಡಿತವಾಗಿಯು ಕಂಡುಬರುತ್ತವೆ. ಕೆ.ಕೇಶವಶರ್ಮ ಅವರು ಮಾಲಗತ್ತಿಯವರ ಕೃತಿಗಳಲ್ಲಿ ಒಳಗೊಂಡಿರುವ ವಿಮರ್ಶೆಯ ಲಕ್ಷಣಗಳನ್ನು ಗುರುತಿಸಿದ್ದಾರೆ. ಅವುಗಳು ಪರೋಕ್ಷವಾಗಿ ಸೀಮಾತೀತ ವಿಮರ್ಶೆಯ ಲಕ್ಷಣಗಳೇ ಆಗಿವೆ. ಕೋಮುಸಾಮರಸ್ಯ, ಜಾತ್ಯಾತೀತತೆಯಲ್ಲಿ ನಂಬಿಕೆ, ಧರ್ಮ ನಿರಪೇಕ್ಷತೆಯನ್ನು ಎತ್ತಿ ಹಿಡಿಯುವುದನ್ನು ಸದಾ ಪೋಷಿಸುವ ನೈತಿಕ ಹೊಣೆ ಸೀಮಾತೀತ ವಿಮರ್ಶೆಯ ಪರಿಕಲ್ಪನೆಯದು.

**ಆಕರ ಗ್ರಂಥಗಳು**


- ಅರವಿಂದ ಮಾಲಗತ್ತಿ (2012). *ಸೀಮಾತೀತ ವಿಮರ್ಶೆ.* ಪೂಜಾ ಮುದ್ರಣ ಮತ್ತು ಪ್ರಕಾಶನ
- ಅರವಿಂದ ಮಾಲಗತ್ತಿ (1999). *ದಲಿತ ಯುಗ ಮತ್ತು ಕನ್ನಡ ಸಾಹಿತ್ಯ.* ಚೇತನ ಬುಕ್ ಹೌಸ್,
- ಅರವಿಂದ ಮಾಲಗತ್ತಿ (1999). *ಪುರಾಣ ಜಾನಪದ ಮತ್ತು ದೇಶೀವಾದ.* ಕನ್ನಡ ಸಾಹಿತ್ಯ ಪರಿಷತ್ತು,
- ಅರವಿಂದ ಮಾಲಗತ್ತಿ (2014). *ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ,* ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ,
- ಕೇಶವಶರ್ಮ, ಕೆ. (2017). ಆಧುನಿಕ ವಿಮರ್ಶೆ ತತ್ವ ಮತ್ತು ಪ್ರಯೋಗಗಳು. ಗೀತಾಂಜಲಿ ಪುಸ್ತಕ ಪ್ರಕಾಶನ
- ಕೇಶವಶರ್ಮ, ಕೆ. (2016). ಸಾಹಿತ್ಯ ವಿಮರ್ಶೆಯಲ್ಲಿ ಸ್ವೀಕಾರ ಮತ್ತು ಪ್ರತಿರೋಧ, ಗೀತಾಂಜಲಿ ಪುಸ್ತಕ ಪ್ರಕಾಶನ